523

ಮೈಸೂರ ಗಜಿತ.

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ ಆಗಸ್ಟ್ ತಾ|| 9, ಸ್ಟ್ 1890.

☞ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ನೋಟೀಸು.

ಮೈಸೂರು ಶೀಮೆಯ ಚೀಫ್ ಕೋರ್ಟಿನಲ್ಲಿ
ಸ್ಟ್ 1890ನೇ ಇಸವಿ ಮಿಸಲೇನಿಯಸ್ ನಂಬರ್ 159.

ಅರ್ಜಿದಾರ್ರು.

ಗೋರಿಬಿದನೂರು ತಾಲ್ಲೂಕು ಮಂಜೇನಹಳ್ಳಿ ಶ್ರೀಲಕ್ಷ್ಮೀ ಕಳಾನಿಧಿ ಆಂಜನೇಯಸ್ವಾಮಿ ಸಹಾಯ ಕಂಪನಿ ಲಿಮಿಟಿಡ್ ಪ್ರಸಿಡೆಂಟ್ ಯ್ಯ. ಲಕ್ಷ್ಮಣರಾವ್ ವಗೈರೇರು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.

ಮೇಲ್ಕಂಡೆ ಯ್ಯ. ಲಕ್ಷ್ಮಣರಾವ್ ವಗೈರೇರು ಮೇಲ್ಕಂಡ ಕಂಪನಿಯು ಸಹಾಯ ಕೊಡತಕ್ಕದ್ದು ವಂದು ಭಾಗವು ಲೇವಾದೇವಿ ನಡಿಸತಕ್ಕದ್ದು ವಂದು ಭಾಗವು ಈ ಪ್ರಕಾರ 2 ಭಾಗಗಳಿಂತಲೂ ಮೊದಲನೆ ಭಾಗದಲ್ಲಿ ಫಂಡು ಕಮ್ಮಿ ಸಹಾಯ ತಗದುಕೊಳ್ಳತಕ್ಕವರು ಜಾಸ್ತಿ ಕಾಲಸ್ ವಸೂಲಾಗುವದಿಲ್ಲ ಮುಂಬೆ ಕಂಪನಿ ಕೆಲಸ ನಡಿಯುವದಕ್ಕೆ ಆವಕಾಶ ವಿಲ್ಲವೆಂತಲೂ ಕೆಲವು ಪೇರ್‌ದಾರ್ರು ಕಂಪನಿ ಮೇಲೆ ದಾವಾಗಳು ಮಾಡಿ ಜಪ್ತಮೆಂಟಿಗೆ ಮುಂಜೆ ಕಂಪನೀಲಿದ್ದ ಹಣ ಜಪ್ತೀ ಮಾಡಿಸಿ ಯಿಧಾರೆ, ಯಿನ್ನೂ ಕೆಲವರು ದಾವಾ ಮಾಡುವದಕ್ಕೆ ಸಿದ್ಧವಾಗಿ ಯಿದ್ದಾರಾದ್ದರಿಂದ ಕಂಪನಿಯು ಮೊದಲುಭಾಗವನ್ನ ಮಾತ್ರ ವೈಂಡಪ್ ಮಾಡಿಸಬೇಕೆಂದು ವಗೈರೆ ಅರ್ಜಿ ಕೊಟ್ಟು ಯಿಧಾರೆ, ಇತ್ಯರ್ಥದ ಬಗ್ಯೆ ಸ್ಟ್ 1890ನೇ ಇಸವಿ ಆಗಸ್ಟ್ ತಿಂಗಳು 19ನೇ ತಾರೀಖು ಮಂಗಳವಾರ ಹಿಯರಿಂಗ್ ಮೊಕರರ್ರ್ಮಾಡಿ ಯಿಧೆ. ಆ ತಾರೀಖು ದಿವಿ 11 ಘಂಟೆಗೆ ಆಕ್ಷೇಪಣೆ ಯಿರತಕ್ಕವರೆಲ್ಲರೂ ಅವರೇ ಆಗಲಿ ಅವರ ತರಫ್ ವೊಕ್ಯಾರಿ ಪಡದ ಆಡ್ವೋಕೇಟರಾಗಲಿ ಈ ಕೋರ್ಟು ರೂಬರೂ ಹಾಜರಾಗತಕ್ಕದ್ದು.

ತಾರೀಖು 25ನೇ ಮಾಹೆ ಜುಲೈ 1890.

ಹುಕ್ಕುಂ ಬವೋಜೀಬ್,
ಎಸ್. ಆರ್. ಸುಬ್ಬರಾಯ ಐಯ್ಯರ್,
ರೆಜಿಸ್ಟ್ರಾರ್.

ವಿದ್ಯಾಭ್ಯಾಸದ ಇಲಾಖೆ.

ಸ್ಟ್ 1890ನೇ ಇಸವಿ ಜುಲೈ ತಾರೀಖು 26.

ಮೈಸೂರು ದೇಶೀಯ ಪರೀಕ್ಷೆ.

(1) ಪರೀಕ್ಷಾ ಗ್ರಂಥಗಳು.

ಸ್ಟ್ 1891ನೇ ಇಸವಿ ಫೆಬ್ರವರೀ ತಿಂಗಳಲ್ಲಿ ನಡೆಯತಕ್ಕ ಮೈಸೂರು ದೇಶೀಯ ವಿದ್ಯಾರ್ಥಿ ಪರೀಕ್ಷೆಗೆ ಬಾಲಕೀಯ್ಯರು ಬರುವಂತೆ ಪ್ರೋತ್ಸಾಹ ಪಡಿಸುವದಕ್ಕೋಸ್ಕರ ಪರೀಕ್ಷಾ ಗ್ರಂಥವಾಪ ಪದ್ಯಸಾರದಲ್ಲಿ ನೇಮಿಸಲ್ಪಟ್ಟಿರುವ ಭಾಗಗಳಿಗೆ ಬದ